ಉದ್ಯೋಗವನ್ನು ದೊರಕಿಸಿಕೊಡುವುದರ ಮೇಲಿನ ಹೊಣೆಯು ಸೃಜನಶೀಲತೆಯನ್ನು ಕುಂಠಿತಗೊಳಿಸುತ್ತದೆ. ಜವಾಬ್ದಾರಿಯ ಹೆಸರಿನಲ್ಲಿ ಹಣಕಾಸಿನ ಹಂಚಿಕೆಯನ್ನು ಪರೀಕ್ಷಾ ಫಲಿತಾಂಶಕ್ಕೇ ಜೋಡಿಸಲಾಗುತ್ತದೆ. ಕೌಟುಂಬಿಕ ಮೌಲ್ಯ ಮತ್ತು ಸಾಮಾಜಿಕ ಕೌಶಲಗಳನ್ನು ಒಳಗೊಂಡ ಸಮಗ್ರ ವ್ಯಕ್ತಿತ್ವದ ಮಾನವ ಜೀವಿಗಳನ್ನು ಸಿದ್ಧಗೊಳಿಸುವ ಕ್ರಿಯೆಯು ಮೂಲೆಗುಂಪಾಗಿದೆ.

**– ಅಮೆರಿಕದ ಶಿಕ್ಷಣ ತಜ್ಞರು**

## ಮಿಷಿಗನ್ ಡೈರಿ ಭಾಗ – 1

# ಅಮೆರಿಕದ ಶಿಕ್ಷಣ ಪದ್ಧತಿ: ನಾವು ಕಲಿಯಬಹುದಾದ ಅಂಶಗಳು

ಈ ಬರಹವು 2015ರ ಏಪ್ರಿಲ್‌ನಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ನಾನು ಕೈಗೊಂಡ ಪ್ರವಾಸದ ಅವಧಿಯಲ್ಲಿ ಪಡೆದ ವೈಯಕ್ತಿಕ ಅನುಭವಗಳನ್ನು ಆಧರಿಸಿದೆ. ಅಲ್ಲಿನ ಶಾಲಾ ಶಿಕ್ಷಣ ಪದ್ಧತಿಯ ಕಾರ್ಯವೈಖರಿಯನ್ನು ಅರಿಯುವುದು ಪ್ರವಾಸದ ಮುಖ್ಯ ಉದ್ದೇಶವಾಗಿತ್ತು. ಮಿಷಿಗನ್ ಸ್ಟೇಟ್ ಯೂನಿವರ್ಸಿಟಿಯು ದೇಶದಲ್ಲಿ ಶಿಕ್ಷಕ–ಶಿಕ್ಷಣ ಕೋರ್ಸ್‌ನ್ನು ಹೊಂದಿರುವ ಅಗ್ರಶ್ರೇಣಿಯ ಸಂಸ್ಥೆಗಳಲ್ಲಿ ಒಂದು. ಅಲ್ಲಿನ ಬೋಧಕವರ್ಗದೊಡನೆ ನಡೆಸಿದ ವಿಚಾರ ವಿನಿಮಯದ ಜೊತೆಗೆ ವ್ಯವಸ್ಥೆಯ ಒಳಗೆ ಹಾಗೂ ಹೊರಗೆ ಇರುವ ತಜ್ಞರೊಡನೆ ಚರ್ಚಿಸಿ, ಶಾಲೆಗಳಿಗೆ ಭೇಟಿ ನೀಡಿ, ವಿಷಯವನ್ನು ಸಂಗ್ರಹಿಸಿ, ವಿಶ್ಲೇಷಿಸಿದ್ದೇನೆ. ಎರಡು ಭಾಗಗಳನ್ನು ಹೊಂದಿರುವ ಸರಣಿ ಬರಹದಲ್ಲಿ ಇದು ಮೊದಲನೆಯದು.

*

ಅಮೆರಿಕದಲ್ಲಿನ ಶಿಕ್ಷಣ ವ್ಯವಸ್ಥೆಯ ರಾಚನಿಕ ಸ್ವರೂಪವನ್ನು ಬಹುಮಟ್ಟಿಗೆ ಭಾರತದಲ್ಲಿರುವ ಶಿಕ್ಷಣ ವ್ಯವಸ್ಥೆಯ ಸ್ವರೂಪಕ್ಕೆ ಹೋಲಿಸಬಹುದು. ಪೂರ್ವಪ್ರಾಥಮಿಕ ಶಿಕ್ಷಣವು ಮೂರನೆಯ ವಯಸ್ಸಿನಲ್ಲಿ ಅಂದರೆ ನರ್ಸರಿ/ ಕಿಂಡರ್‌ಗಾರ್ಟನ್‌ನೊಡನೆ ಆರಂಭವಾಗುತ್ತದೆ. ಮಕ್ಕಳು ಆರನೆಯ ವರ್ಷ ತಲುಪಿದಾಗ ಗ್ರೇಡ್ 1ರಿಂದ ಆರಂಭವಾಗುವ ಪ್ರಾಥಮಿಕ ಶಿಕ್ಷಣವು ಹದಿನಾಲ್ಕನೆಯ

ವಯಸ್ಸಿನಲ್ಲಿ ಗ್ರೇಡ್ 8ನ್ನು ಮುಗಿಸುವವರೆಗೂ ಮುಂದುವರೆಯುತ್ತದೆ. ಗ್ರೇಡ್ 12ಕ್ಕೆ ಸಮನಾದ ಹೈಸ್ಕೂಲ್ ಡಿಪ್ಲೊಮಾವನ್ನು ನೀಡುವ ಪ್ರೌಢ ಶಿಕ್ಷಣವು ಹದಿನೇಳನೆಯ ವಯಸ್ಸಿಗೆ ಕೊನೆಗೊಳ್ಳುತ್ತದೆ. ನಿಯಮಿತವಾದ, ಸಾಮಾನ್ಯ ಶೈಕ್ಷಣಿಕ ವಿಭಾಗಗಳಲ್ಲದೆ ಪ್ರೌಢಶಾಲಾ ಮಟ್ಟದಲ್ಲಿ ಇನ್ನಿತರ ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣವನ್ನು ನೀಡುವ ವ್ಯವಸ್ಥೆಯೂ ಇದೆ. ಆನಂತರ, ಹಲವಾರು ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇಲ್ಲಿನ ಡಿಪ್ಲೊಮಾ ಶಿಕ್ಷಣಕ್ಕೆ ಸಮನಾದ ಎರಡು ವರ್ಷ ಅವಧಿಯ ಅಸೋಸಿಯೇಟ್ ಪದವಿ/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನೀಡುತ್ತವೆ. ಪ್ರಾಥಮಿಕ ಶಿಕ್ಷಣವು ಯಾವಾಗ ಮುಗಿಯುತ್ತದೆ (ಗ್ರೇಡ್ 4 ಅಥವಾ 5) ಅಥವಾ ಪ್ರೌಢಶಾಲೆಯು ಯಾವಾಗ ಆರಂಭವಾಗುತ್ತದೆ (ಗ್ರೇಡ್ 8 ಅಥವಾ 9) ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ದೇಶದಾದ್ಯಂತ ಚಿಕ್ಕಪುಟ್ಟ ವ್ಯತ್ಯಾಸಗಳಿರಬಹುದು. ಸ್ನಾತಕ ಪದವಿ ಕೋರ್ಸ್‌ಗಳು ಸಾಧಾರಣವಾಗಿ ನಾಲ್ಕು ವರ್ಷ ಅವಧಿಯದಾಗಿವೆ. ಮತ್ತೊಂದು ವರ್ಷದ ಅಧ್ಯಯನದಿಂದ ಸ್ನಾತಕೋತ್ತರ ಪದವಿಯನ್ನು ಪಡೆಯಬಹುದು. ಆ ವೇಳೆಗೆ ವಿದ್ಯಾರ್ಥಿಗೆ ಸುಮಾರು ಇಪ್ಪತ್ತೆರಡು ವರ್ಷ ವಯಸ್ಸಾಗಿರುತ್ತದೆ. ಈ ಹಂತದ ನಂತರ, ಆಸಕ್ತಿಯಿದ್ದವರು ಸಂಶೋಧನಾ ಅಧ್ಯಯನ ಅಥವಾ ತದನಂತರದ ಪೋಸ್ಟ್-ಡಾಕ್ಟೊರಲ್ ಅಧ್ಯಯನವನ್ನು ಕೈಗೊಳ್ಳಬಹುದು.

ಕಿಂಡರ್‌ಗಾರ್ಟನ್‌ನಿಂದ ಗ್ರೇಡ್ 12ರ ವರೆಗಿನ ಶಿಕ್ಷಣವು ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿದೆ. ನಮ್ಮಲ್ಲಿರುವ ಶಿಕ್ಷಣ ಹಕ್ಕು ಕಾಯಿದೆಯ ರೀತಿಯಲ್ಲಿಯೇ ಅಮೆರಿಕದ ಸಂವಿಧಾನವು ಈ ಹೊಣೆಯನ್ನು ರಾಜ್ಯಗಳಿಗೆ ವಹಿಸುತ್ತದೆ. ಸರ್ಕಾರವು ನಡೆಸುವ ಸಾರ್ವಜನಿಕ ಶಾಲೆಗಳಲ್ಲದೆ ಸ್ಥಳೀಯ ಶಾಲಾ ಮಂಡಳಿ ಅಥವಾ ಸಾರ್ವಜನಿಕ ವಿಶ್ವವಿದ್ಯಾಲಯಗಳಿಂದ ಅಧಿಕೃತವಾಗಿ ಮಾನ್ಯತೆ ಪಡೆದ ಖಾಸಗಿ ಮತ್ತು ಚಾರ್ಟರ್ಡ್ ಶಾಲೆಗಳು ಇರುತ್ತವೆ. ಜೊತೆಗೆ, ಗೃಹಶಿಕ್ಷಣ ಮತ್ತು ವೋಚರ್ ಪದ್ಧತಿಗಳೂ ಸೇರಿ ಹಲವಾರು ಬಗೆಯ ಶಾಲಾ ಪದ್ಧತಿಗಳು ಜಾರಿಯಲ್ಲಿವೆ. ಆಡಳಿತದ ವಿಷಯಕ್ಕೆ ಬಂದರೆ, ಫೆಡರಲ್ ಸರ್ಕಾರವು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಕಾಯಿದೆ, 'ಯಾವ ಮಗುವೂ ಹಿಂದೆ ಉಳಿಯದು' (No Child Left Behind), ಉಚಿತ ಅಥವಾ ಕಡಿಮೆ ಬೆಲೆಗೆ ಮಧ್ಯಾಹ್ನದ ಊಟ ಅಥವಾ ಅಂಗವೈಕಲ್ಯವುಳ್ಳ ವ್ಯಕ್ತಿಗಳಿಗೆ ಸಂಬಂಧಿಸಿದ ಕಾಯಿದೆ (ಐಡಿಇಎ) ಇತ್ಯಾದಿ ಮೂಲಭೂತ ನೀತಿ ನಿಯಮಗಳಿಗೆ ಸಂಬಂಧಿಸಿದ ಕಾಯಿದೆಗಳನ್ನು ತರುತ್ತದೆ. ರಾಜ್ಯ ಸರ್ಕಾರಗಳು ಪ್ರತಿ ಗ್ರೇಡ್‌ಗೆ ಪ್ರಮಾಣಿತ ಮಟ್ಟಗಳನ್ನು (Standard) ಗೊತ್ತುಪಡಿಸುತ್ತವೆ ಹಾಗೂ ಮೌಲ್ಯಮಾಪನದ ಮಾನದಂಡಗಳನ್ನು

ನಿಗದಿಪಡಿಸುತ್ತವೆ. ಸ್ಥಳೀಯ ಜಿಲ್ಲಾ ಶಾಲಾ ಮಂಡಳಿಗಳು ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತವೆ. ಆ ಪ್ರಕಾರ, ಆಯವ್ಯಯ ಪತ್ರದ ಹಣಕಾಸಿನ ಹಂಚಿಕೆಯಲ್ಲಿ ರಾಜ್ಯಗಳು ಶಿಕ್ಷಣಕ್ಕೆ ಸುಮಾರು ಶೇ. 50ರಷ್ಟು (ಮುಖ್ಯವಾಗಿ ಕಾರ್ಪೊರೇಟ್ ಮತ್ತು ಮಾರಾಟ ತೆರಿಗೆಗಳಿಂದ ಬಂದ ಆದಾಯ) ತಮ್ಮ ಪಾಲನ್ನು ಹೊಂದಿಸಿ ಮೀಸಲಿಡುತ್ತವೆ. ಫೆಡರಲ್ ಸರ್ಕಾರವು ಕೇವಲ ಶೇ. 11ರಷ್ಟನ್ನು ಖರ್ಚುಮಾಡುತ್ತದೆ. ಉಳಿದ ಹಣಕಾಸನ್ನು ಸ್ಥಳೀಯ ಮಟ್ಟದ ಶಾಲಾ ಸಂಸ್ಥೆಗಳು (ಆಸ್ತಿ ತೆರಿಗೆಗಳ ಮೂಲಕ) ಹಾಗೂ ಖಾಸಗಿ ದತ್ತಿ ಸಂಸ್ಥೆಗಳ ಅನುದಾನದ ಮೂಲಕ ಒಗ್ಗೂಡಿಸಲಾಗುತ್ತದೆ. ಎಲ್ಲಾ ಆಯವ್ಯಯ ಪತ್ರಗಳನ್ನೂ ಪ್ರತಿ ಮಗುವಿಗೆ ತಗಲುವ ವೆಚ್ಚದ ಆಧಾರದ ಮೇಲೆ ಪರಿಗಣಿಸಲಾಗುತ್ತದೆ.

ಪ್ರಸವಪೂರ್ವ ಅವಧಿಯಿಂದ ಹಿಡಿದು ಎಂಟನೆಯ ವಯಸ್ಸಿನವರೆಗಿನ ಹಂತದಲ್ಲಿ ಶಿಕ್ಷಣ ಇಲಾಖೆಯು ಗಮನವನ್ನು ಯಾವುದರ ಮೇಲೆ ಕೇಂದ್ರೀಕರಿಸಬೇಕು ಎನ್ನುವುದನ್ನು ಮಾರ್ಗದರ್ಶಿ ತತ್ತ್ವಗಳು (Guiding Principles) ನಿರ್ಧರಿಸುತ್ತವೆ. ಅತಿ ಹೆಚ್ಚು ಅಗತ್ಯವಿರುವ ಮಗುವಿನ ಅಂದರೆ ಕಡಿಮೆ ಆದಾಯವನ್ನುಳ್ಳ ಕುಟುಂಬಗಳಿಂದ ಬಂದ, ವೈವಿಧ್ಯಮಯ ಮತ್ತು ದ್ವಿಭಾಷಾ ಹಿನ್ನೆಲೆಯನ್ನುಳ್ಳ, ವೈಕಲ್ಯ ಅಥವಾ ವಸತಿರಹಿತ ಕುಟುಂಬಗಳ ಹಿನ್ನೆಲೆಯನ್ನುಳ್ಳ ಮಕ್ಕಳ ಕಾಳಜಿಯನ್ನು ಮೊದಲು ತೆಗೆದುಕೊಳ್ಳಬೇಕು ಹಾಗೂ ಮಕ್ಕಳ ಅಭಿವೃದ್ಧಿಯಲ್ಲಿ ಪೋಷಕರ ಮತ್ತು ಸಮುದಾಯಗಳ ಮಾತಿಗೆ ಅವಕಾಶವಿರಬೇಕು ಎಂದು ಮಾರ್ಗದರ್ಶಿ ತತ್ತ್ವಗಳು ಹೇಳುತ್ತವೆ. ಪ್ರೌಢ ಶಾಲಾ ಹಂತಕ್ಕೆ ಬಂದಾಗ ವಿದ್ಯಾರ್ಥಿಗಳನ್ನು 'ಉದ್ಯಮ ಅಥವಾ ಕಾಲೇಜಿಗೆ ಸಿದ್ಧಪಡಿಸು'ವುದರತ್ತ ಸರ್ಕಾರದ ಗಮನವು ಹೊರಳುತ್ತದೆ. ಆ ಹಂತದಲ್ಲಿ ವ್ಯವಸ್ಥೆಯ ಗಮನವು ಮಕ್ಕಳಿಗೆ ಶಾಲಾ ಅವಕಾಶವನ್ನು ಕಲ್ಪಿಸುವದರತ್ತ ಇರುವುದಿಲ್ಲ. ಬದಲಾಗಿ, ಸಾಕ್ಷರತೆ ಹಾಗೂ ಗಣಿತದ ವಿಷಯದಲ್ಲಿ ಮಕ್ಕಳು ಕಲಿಕೆಯ ಕನಿಷ್ಠ ಮಟ್ಟ ತಲುಪುವುದನ್ನು ಖಚಿತಪಡಿಸುವುದಾಗಿರುತ್ತದೆ (ವಿಜ್ಞಾನ ಮತ್ತು ಸಮಾಜ ವಿಜ್ಞಾನದ ವಿಷಯದಲ್ಲಿ ಅಷ್ಟಾಗಿ ಗಮನವಿಲ್ಲ). ಹಲವಾರು ರೀತಿಯ ಪರೀಕ್ಷಾ ವಿಧಾನಗಳನ್ನು ಉಪಯೋಗಿಸಿ ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಅಳೆಯುವ ಅಗಾಧ ಪ್ರಯತ್ನಗಳು ನಡೆಯುತ್ತವೆ. ಕಾರ್ಯ ನಿರ್ವಹಣೆಯ ವಿಷಯದಲ್ಲಿ ಈ ವಿಧಾನಗಳು ಶಿಕ್ಷಕರ ಮೇಲೆಯೇ ಹೆಚ್ಚಿನ ಹೊಣೆಯನ್ನು ಹೊರಿಸುವಂತಿವೆ. 2010ರಲ್ಲಿ ನಲವತ್ತೆರಡಕ್ಕೂ ಹೆಚ್ಚಿನ ರಾಜ್ಯಗಳು ಸಮಾನ ಮೂಲ ಪಠ್ಯಕ್ರಮ(ಸಿಸಿಸಿ–ಕಾಮನ್ ಕೋರ್ ಕರಿಕ್ಯುಲಮ್) ವನ್ನು ಅಳವಡಿಸಿಕೊಂಡವು. ಇದು ವಿಷಯವಾರು ಪ್ರಮಾಣಿತ ಮಟ್ಟವನ್ನು ನಿಗದಿಪಡಿಸುವುದರ ಜೊತೆಗೆ, ವಿದ್ಯಾರ್ಥಿಗಳು ನಾಲ್ಕು ಮಟ್ಟದ ಕೌಶಲಗಳನ್ನು

ಅಂದರೆ – ತಾರ್ಕಿಕ ಕೌಶಲ, ಸಹಯೋಗ ಮತ್ತು ಸಂವಹನ, ತಂತ್ರಜ್ಞಾನದ ಬಳಕೆ ಮತ್ತು ಸಮಸ್ಯಾ ಪರಿಹಾರ ಸಾಮರ್ಥ್ಯಗಳನ್ನು – ಪಡೆದುಕೊಳ್ಳಬೇಕು ಎಂಬುದಾಗಿ ಆದೇಶಿಸುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆಗೆ ವ್ಯಾಪಾರೋದ್ಯಮ ಸಂಸ್ಥೆಗಳು ಕೂಡ ಪಠ್ಯಕ್ರಮವನ್ನು ರೂಪಿಸುವಲ್ಲಿ ಗಮನಾರ್ಹ ಪ್ರಭಾವ ಬೀರಿವೆ.

ಅಮೆರಿಕದಲ್ಲಿ ನಾಲ್ಕೈದು ಶಾಲೆಗಳಿಗೆ ಭೇಟಿ ಕೊಡುವ ಹಾಗೂ ಈ ಕೆಲವು ನೀತಿಗಳು ಅಲ್ಲಿ ನಿಜಕ್ಕೂ ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ನಾವೇ ಕಂಡುಕೊಳ್ಳುವ ಅವಕಾಶವೊಂದು ನಮಗೆ ದೊರಕಿತು. ನಾವು ಭೇಟಿ ಕೊಟ್ಟ ಶಾಲೆಗಳೆಲ್ಲವೂ ಮಿಷಿಗನ್ ಸ್ಟೇಟ್ ಯೂನಿವರ್ಸಿಟಿಯ ಸುತ್ತಮುತ್ತ ಇದ್ದವು. ವಿಶ್ವವಿದ್ಯಾನಿಲಯದಿಂದ ಕಾರಿನಲ್ಲಿ ಹೋದರೆ ನಲವತ್ತೈದರಿಂದ ಅರವತ್ತು ನಿಮಿಷದ ಅವಧಿಯಲ್ಲಿ ತಲುಪಬಹುದಿತ್ತು. ನಮ್ಮ ಭೇಟಿಯ ಕುರಿತು ಶಾಲಾ ಅಧಿಕಾರಿಗಳಿಗೆ ಮುಂಚಿತವಾಗಿಯೇ ತಿಳಿಸಲಾಗಿತ್ತು. ಗ್ರೇಡ್‌ಗಳು, ವಿಧ (ಗ್ರಾಮೀಣ/ನಗರ ಪ್ರದೇಶದ) ಹಾಗೂ ಅವು ಸಮಾಜದ ಯಾವ ವರ್ಗದ ಮಕ್ಕಳಿಗಾಗಿ ಇವೆ (ಮೇಲ್ವರ್ಗ/ಕೆಳವರ್ಗ) ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಶಾಲೆಗಳು ವಿವಿಧ ರೀತಿಯದಾಗಿದ್ದವು. ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾನು ಗಮನಿಸಿದ ಕೆಲವು ಸಂಗತಿಗಳ ಸಾರಾಂಶವು ಆಸಕ್ತಿದಾಯಕವಾಗಿದೆ:

- ಈ ಶಾಲೆಗಳಲ್ಲಿ ಹೆಚ್ಚಿನವು ಮೂಲಭೂತ ಭೌತಿಕ ಸೌಲಭ್ಯಗಳ ದೃಷ್ಟಿಯಿಂದ ಸಾಕಷ್ಟು ಸಮೃದ್ಧವಾಗಿವೆ. ತರಗತಿ ಕೋಣೆಗಳಲ್ಲಿ ಮಕ್ಕಳಿಗೆ ಆಸನ, ಮೇಜುಗಳ ವ್ಯವಸ್ಥೆ, ಶೌಚಾಲಯಗಳಿವೆ. ಬರಹ, ಸುತ್ತೋಲೆಗಳನ್ನು ಪ್ರದರ್ಶಿಸಲು ಫಲಕಗಳಿವೆ. ಕಲಿಕೆ ಮತ್ತು ಬೋಧನೆಯ ಸಾಮಗ್ರಿಗಳಿವೆ. ಶ್ರವಣ ಹಾಗೂ ದೃಶ್ಯ ಮಾಧ್ಯಮಗಳನ್ನು ಬಳಸಲು ಉಪಕರಣಗಳಿವೆ (ಕಂಪ್ಯೂಟರ್‌ಗಳ ಬಳಕೆ ಒಂದು ಮತ್ತು ಎರಡನೆಯ ತರಗತಿಗಳಲ್ಲಿ ಕೂಡ ಇತ್ತು ಹಾಗೂ ಒಂದು ಶಾಲೆಯಲ್ಲಂತೂ ಡಿಜಿಟಲ್ ರೆಕಾರ್ಡಿಂಗ್ ಸ್ಟುಡಿಯೋ ಕೂಡ ಇತ್ತು). ಗ್ರಂಥಾಲಯ, ದೊಡ್ಡ ಸಮಾರಂಭಗಳನ್ನು ನಡೆಸಲು ಸಭಾಭವನ, ಕಚೇರಿ, ಪ್ರಾಂಶುಪಾಲರ ಕೋಣೆ ಮತ್ತು ಸಭೆಗಳನ್ನು ನಡೆಸಲು ಕೊಠಡಿಗಳು, ಜಿಮ್ನೇಶಿಯಮ್ ಸೇರಿದಂತೆ ದೈಹಿಕ ಸ್ವಾಸ್ಥ್ಯ ಕೇಂದ್ರ, ಒಳಾಂಗಣ/ಹೊರಾಂಗಣ ಮೈದಾನಗಳು, ಈಜುಗೊಳ ಇತ್ಯಾದಿಗಳು ಇದ್ದವು.
- ಶಾಲಾ ಜಿಲ್ಲೆ (Shool District) ಎನ್ನುವುದು ಸಾಧಾರಣವಾಗಿ ಆರರಿಂದ ಹತ್ತು ಶಾಲೆಗಳನ್ನು ಹೊಂದಿರುತ್ತದೆ ಹಾಗೂ ತನ್ನ

ಭೌಗೋಳಿಕ ವ್ಯಾಪ್ತಿಯಲ್ಲಿರುವ, ಕಿಂಡರ್‌ಗಾರ್ಟನ್‌ನಿಂದ ಗ್ರೇಡ್ 12ರ ವರೆಗಿನ ವಿವಿಧ ತರಗತಿಯ ಮಕ್ಕಳ ಅಗತ್ಯಕ್ಕೆ ತಕ್ಕ ಹಾಗೆ ಅವುಗಳನ್ನು ನಿರ್ಮಿಸಲಾಗಿರುತ್ತದೆ. ಸದರ್ನ್ ಕೆಂಟ್, ಮಿಡ್ಲ್‌ವಿಲ್‌ನಲ್ಲಿರುವ ಥಾರ್ನಪಲ್ ಕೆಲ್ಲೊಗ್ ಸ್ಕೂಲ್ಸ್ ಎನ್ನುವುದು ಅಂತಹ ಶಾಲಾ ಸಂಕೀರ್ಣಗಳಲ್ಲಿ ಒಂದು. ಈ ಸಂಕೀರ್ಣವು 1936ರಲ್ಲಿ ಆರಂಭವಾಯಿತು. ಇದರಲ್ಲಿ ಪ್ರಾಥಮಿಕದಿಂದ ಪ್ರೌಢ ಶಾಲೆಗಳವರೆಗಿನ ನಾಲ್ಕು ಕಟ್ಟಡಗಳಿವೆ. ಎಲ್ಲವೂ ನಾಲ್ಕು ನೂರರಿಂದ ಐನೂರು ಮೀಟರ್ ವ್ಯಾಪ್ತಿಯೊಳಗಿವೆ. ಗ್ರಾಮೀಣ ಎನ್ನಬಹುದಾದ ಆ ಶಾಲೆಯಲ್ಲಿ ಸುಮಾರು ಮೂರು ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದಾರೆ.

- ಸಂಪನ್ಮೂಲಗಳಿಗೆ ಕೊಡುಗೆ ನೀಡುವುದರ ಮೂಲಕ ಹಾಗೂ ತೆರಿಗೆ ಪಾವತಿಸುವುದರ ಮೂಲಕ ಸ್ಥಳೀಯ ಸಮುದಾಯವು ಶಾಲೆಗೆ ಪೂರ್ಣ ರೀತಿಯ ಬೆಂಬಲ ನೀಡುತ್ತದೆ. ಪೋಷಕರಲ್ಲಿ ಈ ಶಾಲೆ ನಮ್ಮದು ಎಂಬ ಭಾವನೆ ಎದ್ದು ಕಾಣುತ್ತದೆ. ಅವರು ಪೋಷಕ–ಶಿಕ್ಷಕ ಸಭೆಗಳಿಗೂ ಹೊರತಾದ ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.
- **ಸ್ಥಳೀಯ ಶಾಲಾ ಜಿಲ್ಲೆಯು ಶಾಲೆಗಳಿಗೆ ಅನೇಕ ರೀತಿಯಲ್ಲಿ ಬೆಂಬಲ ನೀಡುತ್ತದೆ:** ವಿಶೇಷವಾಗಿ ಬೋಧನಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸ್ಥಿರವಾದ ಹಣಕಾಸಿನ ಬೆಂಬಲ ನೀಡುವುದು, ಪ್ರಬಲವಾದ ಸಮುದಾಯ ಬೆಂಬಲವನ್ನು ಪಡೆದುಕೊಳ್ಳುವುದು, ವಿದ್ಯಾರ್ಥಿಗಳ ಸುರಕ್ಷತೆಯ ಕಾಳಜಿ ಹಾಗೂ ಸಿಬ್ಬಂದಿಗಳ ಪೋಷಣೆ ಮುಂತಾದವು. ತಮ್ಮ ಶಾಲೆಗಳನ್ನು ಆಕರ್ಷಕವಾಗಿಸಲು ಹಾಗೂ ಕ್ರಿಯಾಶೀಲವಾಗಿಡಲು ಕೇವಲ ಜಿಲ್ಲಾ ಮೇಲುಸ್ತುವಾರಿ ಅಧಿಕಾರಿಯಲ್ಲದೆ, ಪಠ್ಯಕ್ರಮ ನಿರ್ದೇಶಕರು ಮತ್ತು ಹಣಕಾಸಿನ ನಿರ್ದೇಶಕರು ಒಟ್ಟಾಗಿ ಶ್ರಮ ವಹಿಸುತ್ತಾರೆ. ಉದಾಹರಣೆಗೆ, ಸದರ್ನ್ ಕೆಂಟ್ ಶಾಲಾ ಜಿಲ್ಲೆಯಲ್ಲಿ ಪ್ರತಿ ಮಗುವಿನ ವಾರ್ಷಿಕ ಶಾಲಾನಿಧಿ ಸುಮಾರು 7126 ಅಮೆರಿಕನ್ ಡಾಲರ್ ಇತ್ತು. ಶೇ. 36ರಷ್ಟು ಬಡ ವಿದ್ಯಾರ್ಥಿಗಳು ಅದರಲ್ಲಿಯೂ ಹೆಚ್ಚಾಗಿ ವಲಸಿಗ ಕುಟುಂಬಗಳಿಂದ ಬಂದ ಅಥವಾ ಒಂಟಿ ಪೋಷಕರನ್ನು ಹೊಂದಿರುವ ಮಕ್ಕಳು ಉಚಿತ ಊಟದ ಸೌಲಭ್ಯವನ್ನು ಪಡೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಇಂತಹ ನಿಧಿಯ ವ್ಯವಸ್ಥೆಯು ಸಾಕಷ್ಟು ಮಹತ್ವವನ್ನು ಪಡೆದುಕೊಳ್ಳುತ್ತದೆ.

- ತರಗತಿ ಕೋಣೆಯ ಪ್ರಕ್ರಿಯೆಗೆ ಬಂದರೆ, ಶಿಕ್ಷಕರು ವೇಳಾಪಟ್ಟಿ ಮತ್ತು ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.
- ಶಿಕ್ಷಕರ ವೃತ್ತಿ ಅನುಭವಕ್ಕೂ ಅವರು ಬೋಧಿಸುವ ಗ್ರೇಡ್‌ಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಅತ್ಯಂತ ಹೆಚ್ಚು ಅನುಭವವನ್ನು ಹೊಂದಿರುವ ಶಿಕ್ಷಕರೂ ಕೂಡ ಗ್ರೇಡ್ 1–2 ಸೇರಿದಂತೆ ಕೆಳಗಿನ ಹಂತದ ತರಗತಿಗಳಿಗೆ ಪಾಠ ಮಾಡುತ್ತಿರಬಹುದು.
- ಶಿಕ್ಷಕ–ಶಿಕ್ಷಣ ಕೋರ್ಸ್‌ನ ಪ್ರಶಿಕ್ಷಣಾರ್ಥಿಗಳು (ಇಂಟರ್ನ್ ಶಿಕ್ಷಕರು) ಹಿರಿಯ ಶಿಕ್ಷಕರಿಗೆ ಗುಂಪುಕಾರ್ಯದಲ್ಲಿ ನೆರವಾಗುವುದಲ್ಲದೆ ಓದು ಅಥವಾ ಇನ್ನಿತರ ಚಟುವಟಿಕೆಗಳಲ್ಲಿ ಹಿಂದೆ ಬಿದ್ದಿರುವ ನಿರ್ದಿಷ್ಟ ಮಕ್ಕಳಿಗೆ ಬೆಂಬಲ ನೀಡುತ್ತಾರೆ. ಕೆಲವು ಅವಧಿ ಪಾಠವನ್ನೂ ಮಾಡುತ್ತಾರೆ. ವಿಶೇಷ ಅಗತ್ಯಗಳನ್ನು ಹೊಂದಿರುವ ಮಕ್ಕಳಿಗೆಂದೇ ಆ ಕ್ಷೇತ್ರದಲ್ಲಿ ತರಬೇತಿ ಪಡೆದ ಶಿಕ್ಷಕರು ಅಲ್ಲಿ ಇದ್ದರು.
- ಶಿಕ್ಷಕರಿಗೆ ನಿರ್ದಿಷ್ಟವಾದ, ನಿಗದಿಪಡಿಸಿದ ತರಗತಿ ಹಾಗೂ ತರಗತಿ ಕೋಣೆಗಳಿವೆ. ಉದಾಹರಣೆಗೆ, ವಿಜ್ಞಾನದ ಶಿಕ್ಷಕರೊಬ್ಬರು ತಮಗೆ ನಿಗದಿಪಡಿಸಿದ ತರಗತಿಕೋಣೆಯಿಂದ ಆಚೆ ಹೋಗುವುದಿಲ್ಲ. ವಿವಿಧ ವಿಭಾಗಗಳ ಅಥವಾ ಗ್ರೇಡ್‌ಗಳ ವಿದ್ಯಾರ್ಥಿಗಳು ವಿಜ್ಞಾನವನ್ನು ಕಲಿಯಲು ಅವರ ತರಗತಿಕೋಣೆಗೇ ಬಂದು ಹೋಗುತ್ತಾರೆ. ಇದರಿಂದ ಶಿಕ್ಷಕರಿಗೆ, ವಿವಿಧ ವಿದ್ಯಾರ್ಥಿಗಳಿಗೆ ಪ್ರಸ್ತುತವಾದ ಸಾಮಗ್ರಿಗಳನ್ನು ನವೀನ ರೀತಿಯಲ್ಲಿ ತಮ್ಮ ಕೋಣೆಯೊಳಗೆ ಪ್ರದರ್ಶಿಸಲು ಸಾಧ್ಯವಾಗುತ್ತದೆ.
- ಚರ್ಚೆ, ಪ್ರಯೋಗಗಳು ಹಾಗೂ ನಡೆಸಲಾಗುವ ಇನ್ನಿತರ ಹಲವಾರು ತರಹದ ಚಟುವಟಿಕೆಗಳ ಕಾರಣ ತರಗತಿಗಳು ಕ್ರಿಯಾಶೀಲವಾಗಿದ್ದವು. ಷಾರ್ಲಟ್ ಪಬ್ಲಿಕ್ ಸ್ಕೂಲ್ ಎನ್ನುವ ಒಂದು ಪ್ರೌಢ ಶಾಲೆಯಲ್ಲಿ ಮಕ್ಕಳ ಇಂಗ್ಲಿಷ್ ಭಾಷಾ ಗ್ರಹಿಕೆಯು ಆಶ್ಚರ್ಯಕರವೆನ್ನುವ ರೀತಿಯಲ್ಲಿ ಸರಾಸರಿ ಮಟ್ಟಕ್ಕಿಂತಲೂ ಕಡಿಮೆಯಿತ್ತು. ಕೆಲವು ಮಕ್ಕಳು ಅಕ್ಷರಗಳನ್ನು ಬರೆಯುವಲ್ಲಿ ಬಹಳಷ್ಟು ತಪ್ಪುಗಳನ್ನು ಮಾಡಿದ್ದರು. ಇನ್ನು ಕೆಲವು ಮಕ್ಕಳು ಮೂಲ ಬೀಜಗಣಿತವನ್ನು ಅರ್ಥೈಸಿಕೊಳ್ಳಲು ಹೆಣಗುತ್ತಿದ್ದರು. ಅತ್ಯುತ್ತಮ ಮೂಲಭೂತ ಸೌಕರ್ಯಗಳ ಲಭ್ಯತೆ ಅಥವಾ ಕಂಪ್ಯೂಟರ್ ನೋಟ್‌ಬುಕ್, ಐಪ್ಯಾಡ್‌ಗಳಂತಹ ಅತ್ಯಾಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಹೊಂದಿರುವ ಮಾತ್ರಕ್ಕೆ ತರಗತಿಕೋಣೆಗಳಲ್ಲಿ

ವಿದ್ಯಾರ್ಥಿಗಳು ಕಲಿಯುತ್ತಾರೆ ಎಂದೇನಿಲ್ಲ, ಅವರಿಗೆ ಬೇಕಾಗಿರುವುದು ವಿಷಯವಸ್ತುವನ್ನು ನವೀನ ರೀತಿಯಲ್ಲಿ ತಿಳಿಯಪಡಿಸಬಲ್ಲ ಒಳ್ಳೆಯ ಶಿಕ್ಷಕರು ಎನ್ನುವ ಸಂಗತಿಯೂ ಇನ್ನಷ್ಟು ನಿಖರವಾಯಿತು.

- ಶಾಲೆಯ ಪ್ರಾಂಶುಪಾಲರು ಬೋಧನೆಯಲ್ಲಿ ಅನುಭವವನ್ನು ಹೊಂದಿರುವುದರ ಜೊತೆಗೆ ವಿಶೇಷವಾಗಿ ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ತರಬೇತಿಯೊಂದನ್ನು ಪಡೆಯುತ್ತಾರೆ. ಅವರು ತಮ್ಮದೇ ಆದ ವೃತ್ತಿಪರ ಕಲಿಕಾ ಸಮುದಾಯವನ್ನು ಹೊಂದಿರುತ್ತಾರೆ. ಅದರ ಸಭೆಯು ವಾರಕ್ಕೊಮ್ಮೆ ನಡೆಯುತ್ತದೆ. ಅವರು ಹೆಚ್ಚಾಗಿ ಶೈಕ್ಷಣಿಕ ಮುಂದಾಳತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಸಾಕಷ್ಟು ಪರಿಣಾಮಕಾರಿಯಾಗಿ ಸ್ಪಷ್ಟವಾದ, ಸ್ಫುಟವಾದ ಶೈಲಿಯಲ್ಲಿ ವಿಷಯವನ್ನು ಆಕರ್ಷಕವಾಗಿ ಪ್ರಸ್ತುತ ಪಡಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ.
- ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಹಲವಾರು ಉನ್ನತ ಸ್ತರದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅನುಕೂಲವಾಗುವಂತೆ ಒಟ್ಟೊಟ್ಟಿಗೇ ಸಿದ್ಧತೆ ನಡೆಯುತ್ತಿತ್ತು. ಗ್ರೇಡ್ 12ರಿಂದ ಹೊರಬೀಳುವ ಶೇ. 60 ವಿದ್ಯಾರ್ಥಿಗಳು ತಮ್ಮನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಬಯಸುತ್ತಾರೆ ಹಾಗೂ ಸಾಕಷ್ಟು ಸಂಖ್ಯೆಯ ವಿದ್ಯಾರ್ಥಿಗಳು ಭೂಸೇನೆ ಮತ್ತು ನೌಕಾಸೇನೆಯನ್ನು ಸೇರುವ ಆದ್ಯತೆಯನ್ನು ಹೊಂದಿದ್ದಾರೆ ಎನ್ನುವುದನ್ನು ತಿಳಿದಾಗ ಈ ಆಯಾಮವು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಒಂದು ಪ್ರೌಢಶಾಲೆಯಲ್ಲಿ ಮರಗೆಲಸವನ್ನು ಕಲಿಸುತ್ತಿದ್ದರು. ಅನುಭವೀ ಶಿಕ್ಷಕರೊಬ್ಬರು ಮರದ ಹಲವಾರು ತರಹದ ಮಾದರಿಗಳನ್ನು ಕೈಯಿಂದ ತಯಾರಿಸುವುದಕ್ಕೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಆಟೋಕ್ಯಾಡ್ ವಿನ್ಯಾಸ ಹಾಗೂ ಸಂಗೀತದ ಕೋರ್ಸ್‌ಗಳೂ ಲಭ್ಯವಿದ್ದವು. ಪರೀಕ್ಷೆಗಳಲ್ಲಿ ಪಡೆದ ಅಂಕಗಳು ಹಾಗೂ ಹಲವಾರು ಸ್ಪರ್ಧೆಗಳಲ್ಲಿ ಗಳಿಸಿದ ಯಶಸ್ಸು ಶಾಲೆಯ ಬ್ರ್ಯಾಂಡ್ ಮೌಲ್ಯವನ್ನು ಹೆಚ್ಚಿಸುತ್ತವೆ.

ಶಾಲೆಗಳಿಗೆ ಭೇಟಿ ಇತ್ತು ಗಮನಿಸಿದ ಮೇಲ್ಕಂಡ ಅಂಶಗಳನ್ನು ಇಡೀ ಅಮೆರಿಕಕ್ಕೆ ಸಾಮಾನ್ಯೀಕರಿಸಿ ಹೇಳಿದರೆ ತಪ್ಪಾದೀತು. ಗ್ರಾಮೀಣ ಭಾಗಗಳಲ್ಲಿ, ಬೇರೆ ರಾಜ್ಯಗಳಲ್ಲಿ ವಾಸ್ತವವು ತುಂಬಾ ಭಿನ್ನವಾಗಿದ್ದೀತು. ಹೆಣ್ಣುಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಗರ್ಭಧರಿಸುವುದು, ನಿರುದ್ಯೋಗ, ಮಾದಕವಸ್ತುಗಳ ವ್ಯಸನ,

ಮದ್ಯಪಾನ, ಬೊಜ್ಜು, ಸಾಲ ಹಾಗೂ ದುಂದುವೆಚ್ಚ, ದ್ವೀಪದಂತಾದ ಅತಿ ವೈಯಕ್ತಿಕತೆಯ ಬಾಳು, ಅಸೂಕ್ಷ್ಮತೆ, ಬಡವ ಬಲ್ಲಿದರ ನಡುವಿನ ಕಂದಕ, ಸ್ವಯಂಶಿಸ್ತು ಹಾಗೂ ಬಾಹ್ಯ ಆಕ್ರಮಣಕಾರೀ ಸ್ವಭಾವಗಳಿಗೆ ಸಂಬಂಧಿಸಿದಂತೆ ವೈರುದ್ಧ್ಯ ಇತ್ಯಾದಿ ತೀವ್ರಸ್ವರೂಪದ ಸಮಸ್ಯೆಗಳು ಅಮೆರಿಕದ ಸಮಾಜವನ್ನು ಬಾಧಿಸುತ್ತಿವೆ. ಈ ಎಲ್ಲ ಸಂಕೀರ್ಣ ಸಾಮಾಜಿಕ ಸಮಸ್ಯೆಗಳಿಗೆ ಸಮಾನ ಮೂಲ ಪಠ್ಯಕ್ರಮದಿಂದ ಪರಿಹಾರ ಸಿಗಬಹುದೇ ಎನ್ನುವುದು ಊಹೆಗೆ ಬಿಟ್ಟ ಸಂಗತಿ.

ಅಮೆರಿಕದ ವ್ಯವಸ್ಥೆಯೊಳಗೇ ಇರುವ ಕೆಲವು ತಜ್ಞರೂ ಕೂಡ ಶಿಕ್ಷಣದ ಗುಣಮಟ್ಟವು ಮುಖ್ಯವಾಗಿ ಶಿಕ್ಷಕರ ಗುಣಮಟ್ಟವನ್ನು, ಅವರು ಎಲ್ಲಿಂದ ಬಂದಿದ್ದಾರೆ ಎನ್ನುವುದನ್ನು, ಅವರು ಹೊಂದಿರುವ ಶಿಕ್ಷಣದ ರೀತಿಯನ್ನು ಹಾಗೂ ಅವರು ಹೊಂದಿರುವ ವಿಷಯಜ್ಞಾನದ ಮಟ್ಟವನ್ನು ಅವಲಂಬಿಸಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಇದು ತೈವಾನ್‌ನಂತಹ ದೇಶದಲ್ಲಿನ ಹಾಗಲ್ಲ. ಅಲ್ಲಿ ಶಿಕ್ಷಕರಿಗೆ ಅತ್ಯಂತ ಹೆಚ್ಚಿನ ಗೌರವವನ್ನು ತೋರಿಸಲಾಗುತ್ತದೆ. ಹಾಗಾಗಿ, ಒಳ್ಳೆಯ ವಿಷಯಜ್ಞಾನ ಹೊಂದಿರುವ ಅತ್ಯುತ್ತಮ ವಿದ್ಯಾರ್ಥಿಗಳು ಬೋಧನೆಯನ್ನು ವೃತ್ತಿಯಾಗಿ ಸ್ವೀಕರಿಸುತ್ತಾರೆ. ಸಮಾನ ಮೂಲ ಪಠ್ಯಕ್ರಮವು ಪರಿಹಾರಗಳನ್ನು ಒದಗಿಸಿದರೂ ಕೂಡ ಪಠ್ಯಕ್ರಮದ ನಿರ್ವಹಣೆಯೇ ದೊಡ್ಡದೊಂದು ಸಮಸ್ಯೆಯಾಗಿರುವುದರಿಂದ ಎಲ್ಲಾ ಶಿಕ್ಷಕರಿಗೂ ಇದು ಹಿತಕರವಾಗಿ ಕಾಣಿಸುತ್ತಿಲ್ಲ ಎಂದು ಅವರು ನಂಬಿದ್ದಾರೆ. ಇದರ ಜೊತೆಗೆ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಪಟ್ಟಭದ್ರ ಹಿತಾಸಕ್ತಿಗಳ ಪ್ರಬಲ ಗುಂಪಿನಿಂದಾಗಿ ಪರಿಸ್ಥಿತಿಯನ್ನು ಸುಧಾರಿಸಲು ಬೇಕಾದ ಸನ್ನಿವೇಶ ಇರುವುದಿಲ್ಲ. ಉದ್ಯೋಗವನ್ನು ದೊರಕಿಸಿಕೊಡುವುದರ ಮೇಲೆ ಇರುವ ಅತಿ ಹೆಚ್ಚಿನ ಹೊಣೆಯು ಸೃಜನಶೀಲತೆಯನ್ನು ಕುಂಠಿತಗೊಳಿಸುತ್ತದೆ. ಜವಾಬ್ದಾರಿಯ ಹೆಸರಿನಲ್ಲಿ ಸಾಧನೆಯ ಮಟ್ಟ ಮತ್ತು ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದ್ದು, ಹಣಕಾಸಿನ ಹಂಚಿಕೆಯನ್ನು ಪರೀಕ್ಷಾ ಫಲಿತಾಂಶಕ್ಕೇ ಜೋಡಿಸಲಾಗುತ್ತದೆ. ರೂಢಿಗತವಾದ ಫೆಡರಲ್ ಮತ್ತು ರಾಜ್ಯ ನೀತಿನಿಯಮಗಳನ್ನು ಅನುಸರಿಸುವ ಭರದಲ್ಲಿ ಕೌಟುಂಬಿಕ ಮೌಲ್ಯಗಳನ್ನು ಮತ್ತು ಸಾಮಾಜಿಕ ಕೌಶಲಗಳನ್ನು ಬೆಳೆಸಿಕೊಳ್ಳುವ ಮೂಲಕ ಸಮಗ್ರ ವ್ಯಕ್ತಿತ್ವವನ್ನು ಹೊಂದಿರುವ ಮಾನವ ಜೀವಿಗಳನ್ನು ಸಿದ್ಧಗೊಳಿಸುವ ಕ್ರಿಯೆಯು ಮೂಲೆಗುಂಪಾಗಿದೆ ಎಂದು ಅವರು ಒತ್ತಿ ಹೇಳುತ್ತಾರೆ. ಸ್ಥಳೀಯ ಸರ್ಕಾರಗಳು ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವ ಬಯಕೆಯನ್ನು ಹೊಂದಿವೆ. ಜೊತೆಗೆ, ಫೆಡರಲ್ ಸರ್ಕಾರದಿಂದ ಹೆಚ್ಚಿನ ಹಣಕಾಸಿನ ನೆರವು ಬೇಕೆಂದೂ ಬೇಡಿಕೆ ಸಲ್ಲಿಸುತ್ತವೆ. ಶಿಕ್ಷಣ ವ್ಯವಸ್ಥೆಯಲ್ಲಿನ ಇಂತಹ ವೈರುದ್ಧ್ಯಗಳನ್ನು ಕೂಡ ಅವರು ಎತ್ತಿ ತೋರಿಸುತ್ತಾರೆ.

ಅಮೆರಿಕದ ವ್ಯವಸ್ಥೆಗೆ ಸಂಬಂಧಿಸಿದ ವಿಷಯದಲ್ಲಿ ತಜ್ಞರಾದವರು ವ್ಯಕ್ತಪಡಿಸಿದ ಕಾಳಜಿಗಳು ಬಹುಶಃ ನಮ್ಮನ್ನು ಗಂಭೀರ ಚಿಂತನೆಗೆ ಹಚ್ಚಲೇಬೇಕಿದೆ. ಏಕೆಂದರೆ, ನಮ್ಮಲ್ಲಿ ಬಹಳಷ್ಟು ಜನ, ಆಧುನಿಕ ಸೌಲಭ್ಯಗಳನ್ನು ಹೊಂದಿರುವ, ಅತ್ಯಂತ ಪರಿಪೂರ್ಣವಾದ ವಾತಾವರಣದಲ್ಲಿ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತೇವೆ ಎಂದು ಹೇಳಿಕೊಳ್ಳುವ ಶ್ರೇಷ್ಠ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸಲು ಕಾತರರಾಗಿರುವಂತೆ ತೋರುತ್ತದೆ. ಆದರೆ, ಇದೇ ವೇಳೆಗೆ ಉತ್ತಮ ಗುಣಮಟ್ಟದ ಶಿಕ್ಷಕರು, ಬೋಧನೆ-ಕಲಿಕೆಯ ವಾತಾವರಣ, ಮಗುಸ್ನೇಹಿ ಶಾಲಾ ಪರಿಸರ ಹಾಗೂ ಮಗುವಿನ ಸಮಗ್ರ ಬೆಳವಣಿಗೆ ಮುಂತಾದ ಪ್ರಮುಖ ಅಂಶಗಳನ್ನು ಕಡೆಗಣಿಸುತ್ತಿದ್ದೇವೆ.

■

ಬಿ.ಫಸ್ಟ್, 18-04-2016

